ಪ್ರತಿ ಸಲ ಇಷ್ಟು ದೂರದ ವನ್ನಳ್ಳಿ ಬ್ಯಾಲೆಗೆ ತಂದು ಗಣಪತಿ ಮುಳುಗಿಸುವುದರ ಬದಲು, ಹಿತ್ತಲ ಬಾವಿ ಇನ್ನೊಂಚೂರು ಅಗಲವಿದ್ದಿದ್ದರೆ ಬಾವಿಯಲ್ಲೇ ವಿಸರ್ಜನೆ ಮಾಡಬಹುದಿತ್ತು ಎಂದು ಶೇಖರ ಮುಂದಿನ ವರ್ಷದೊಳಗೆ ಬಾವಿ ದೊಡ್ಡ ಮಾಡಿಸುವುದರ ಬಗ್ಗೆ ಯೋಚಿಸುತ್ತಿದ್ದರೆ ಪುರು ಅಮ್ಮನ ಒತ್ತಾಯ, ಆರ್ಭಟದ ಅಲೆಯಲ್ಲಿ ಕವಲೊಡೆದು, ಅದೆಲ್ಲಿಯೋ ಅವಿತು ದಾಂಧಲೆ ಎಬ್ಬಿಸುತ್ತಿರುವ ಒಂದು ರೀತಿಯ ಅಭದ್ರತೆಯ ಭಾವನೆಯನ್ನು ಕಿತ್ತೆಸೆಯಲು ತಿಣುಕುತ್ತಿದ್ದ.

ವನ್ನಳ್ಳಿ ಬೇಲೆಯಲ್ಲಿ ಮಳೆಗೆ ನೆನೆದ ಹೊಯ್ಗೆ ಗಟ್ಟಿಯಾಗಿ ಕುಳಿತು, ಹೆಜ್ಜೆ ಎತ್ತಿಡುವಾಗ ಕುಯುಪುಯು ಶಬ್ದ ಮಾಡುವುದನ್ನು ನಿಲ್ಲಿಸಿತ್ತು. ಸಮುದ್ರದ ನೀರೂ ಸಹ ರಸ್ತೆಯ ನೀರಿನಂತೆ ಗಣ್ಣು ಹೋಗಿತ್ತು. ಸಮುದ್ರವೆಂದರೆ ಕೆಸರು ಹೊಂಡದಂತೆ ಕಾಣಿಸುವಷ್ಟು!! ಗಣಪತಿ ವಿಸರ್ಜನೆಗೆಂದು ಶೇಖರ, ಪುರು ಮತ್ತು ಶೇಖರನ ಚಿಕ್ಕಪ್ಪನ ಮೂರ್ನಾಲ್ಕು ಮಕ್ಕಳು ಸಮುದ್ರಕ್ಕಿಳಿದರೆ, ಎಲ್ಲರನ್ನೂ ಹಾರಿಸಿಕೊಂಡು ಹೋಗುವಷ್ಟು ಬುರುಬುರು ತೂಫಾನು. ಗಾಳಿಗೆದುರಾಗಿ ನಿಂತರೆ ಉಸಿರೆಳೆದುಕೊಳ್ಳುವುದು ಕಷ್ಟ ಎನಿಸುವ ಅಬ್ಬರದಲ್ಲಿ ಬಾಕಿ ಉಳಿದವರೆಲ್ಲ ಗಾಳಿಗೆ ಮುಚ್ಚುತ್ತಿದ್ದ ಕಣ್ಣನ್ನು ಅರೆತೆರೆದು ಮಳೆಯ ಬಗ್ಗೆಯೇ ಮಾತನಾಡುತ್ತ ದಂಡೆಯಲ್ಲೆ ನಿಂತಿದ್ದರು.

ಸೊಂಟ ಮುಳುಗುವಷ್ಟು ನೀರ ವರೆಗೆ ಸಾಗಿ ಗಣಪತಿಯನ್ನು ಹೊತ್ತ ಶೇಖರ ಎರಡು ಬಾರಿ ಗಣಪತಿಯ ಗೂಡಾಗಿ ಮುಳಕಿ ಹೊಡೆದ. ಮೂರನೇ ಬಾರಿ ಮುಳುಗಿದವ ಅರೆಕ್ಷಣ ಬಿಟ್ಟು ಎರಡು ಮಾರು ಮುಂದೆ ಉಸಿರಾಡಲು ಹೆಣಗುತ್ತ ಮೇಲೆದ್ದ.

ಪುರುವಿಗೆ ಅಂದಿನ ಶೇಖರನ ಕಣ್ಣಿನ ದೈನ್ಯ ಭಾವ ಇನ್ನೂ ಚೆನ್ನಾಗಿ ನೆನಪಿದೆ, 'ತನ್ನನ್ನು ರಕ್ಷಿಸಿಯಾನು' ಎಂಬ ಪುರುವಿನ ಮೇಲಿನ ನಂಬಿಕೆ ಅವನ ಕಡುಗಪ್ಪು ಕಣ್ಣುಗಳಲ್ಲಿ ಗುರುತಿಸುವಂತಿತ್ತು. ಶೇಖರ ಮತ್ತೊಂದೆರಡು ಬಾರಿ ಹಾಗೆಯೇ ಮುಳುಗೆದ್ದ, ಕೈ ಕಾಲು ಬಡಿದುಕೊಳ್ಳುತ್ತ, ಪುರುವನ್ನು ನೋಡುತ್ತ!! ಬಹುಶಃ ಪುರು ಧೈರ್ಯ ಮಾಡಿ ಎರಡು ಹೆಜ್ಜೆ ಮೀಸಾಡಿ ಮುಂದೆ ಹೋಗಿ ಶೇಖರನನ್ನು ಹಿಡಿದರೆ ಬಚಾವು ಮಾಡಬಹುದಿತ್ತೇನೋ!! ಎಂತಹ ಭಯಂಕರ ಅಲೆಗಳ ನಡುವಲ್ಲೂ ಈಸಿ ಎದ್ದುಬರುವ ಪುರು ಅಂದು ಕುಮಟೆಯ ಸಮುದ್ರತೀರದ ಕಲ್ಲಿನಂತೆ ಚೂರೂ ಹಂದದೆ ನಿಂತಲ್ಲೇ ನಿಂತಿದ್ದ.

ಪುರುವಿಗೆ ಆ ಕ್ಷಣದಲ್ಲಿ ಏನಾಯಿತೋ, ತನ್ನ ಅಭದ್ರತೆಯ ಭಾವನೆಗೆ ಶಾಶ್ವತ ಪರಿಹಾರ ದೊರಕಿತೆಂಬ ನಿರಾಳತೆಯಿತ್ತೋ, ಅಥವಾ ಎರಡು ಹೆಜ್ಜೆ ಮುಂದಾದರೆ ತಾನೂ ಶೇಖರನೊಂದಿಗೆ ಮುಳುಗಿಬಿಡಬಹುದೆಂಬ ಭಯವಿತ್ತೋ. ಪುರು ಮಾತ್ರ ತನ್ನನ್ನೇ ನೋಡುತ್ತಿದ್ದ ಶೇಖರನ ಕಡುಗಪ್ಪು ಕಣ್ಣುಗಳನ್ನು ನೋಡುತ್ತ ನಿಂತುಬಿಟ್ಟಿದ್ದ. ಶೇಖರನೆಂಬುವವ ಈಗಷ್ಟೇ ಇಲ್ಲೇ ಇದ್ದ ಎನ್ನುವ ಕುರುಹೂ ಇಲ್ಲದಂತೆ ಕ್ಷಣಾರ್ಧದಲ್ಲಿ ಸಮುದ್ರದಲೆಯ ನಡುವೆ ಶೇಖರ ಕಳೆದುಹೋಗಿಯೇ ಬಿಟ್ಟ.

ಶೇಖರನ ಹೆಣ ಎಷ್ಟು ಹುಡುಕಿದರೂ ಸಿಕ್ಕಿರಲಿಲ್ಲ. ಇದೇ ಘಟನೆ ತನ್ನನ್ನು ನೆಮ್ಮದಿಯಿಂದ ಬದುಕಲು ಬಿಡದು ಎಂಬ ನಿರೀಕ್ಷೆಯೂ ಇರದ ಪುರು ಕೆಲವು ತಿಂಗಳು ಕಾದ, ತನ್ನಲ್ಲಿ ಹೂತ ಅಪರಾಧಿ ಭಾವ ತೊಳೆದುಕೊಳ್ಳಲು ಸಾಹಸಪಟ್ಟ. ಗೆಳೆಯನಿಗಾಗಿ ಅತ್ತು ಕರೆದ. ಕೈ ಕಾಲು ಸೆಟೆದುಕೊಂಡ ಅರೆಗಣ್ಣಿನ ಶೇಖರನ ಹೆಣವನ್ನು ಯಾವ ಯಾವ ಮೀನು ತಿಂದು ಕೊಬ್ಬಿರಬಹುದು! ಬಂಗಡೆ ತಂದಾಗ ಅಂಜುತ್ತಿದ್ದ. ಅದೇ ಮೀನನ್ನು ತಾನು ತಿನ್ನುವುದೇ ಎಂಬ ಎಂತಹದ್ದೋ ಹುಚ್ಚುಚ್ಚು ಕಲ್ಪನೆಗಳು ಪುರುವನ್ನು ಇನ್ನೂ ಟೊಳ್ಳಾಗಿಸುತ್ತಿದ್ದವು. ಶೇಖರನನ್ನು ತಾನಾಗಿ ಕೊಂದಿರದಿದ್ದರೂ ಕೊಡಬೇಕಾದ ಸಮಯದಲ್ಲಿ ಶೇಖರನತ್ತ ಕೈಚಾಚದೇ ಹೋದದ್ದು ಒಂದು ರೀತಿಯಲ್ಲಿ ಕೊಲೆ ಮಾಡಿದಂತೆಯೇ ಎಂಬ ಯೋಚನೆ ಪುರುವನ್ನು ಕ್ಷಣಕ್ಷಣಕ್ಕೂ ಕುಗ್ಗಿಸುತ್ತಿತ್ತು. ಹೋಟೆಲು, ಅಲ್ಲಿಗೆ ಬರುವ ಅರೆಕೊಳೆತ